ಇದಕ್ಕೆ ಸಂಬಂಧಪಟ್ಟಂತೆ ಗಿಡಗಳನ್ನು ತಯಾರು ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಪ್ರತ್ಯಕ್ಷ ಗಿಡ ನಡೆವುದು. ಸೀಡ್ ಬಾಲನ್ನು ನೆಲದಲ್ಲಿ ಹೂತು ನೆಡುವುದು, ಆಯಾ ಗಿಡಗಳ ಬೀಜಗಳನ್ನು ನೇರವಾಗಿ ಬಿತ್ತುವುದು ಮುಂತಾದ ಪ್ರಕಾರಗಳಲ್ಲಿ ಈ ಅಭಿಯಾನ ನಡೆಯಲಿದೆ.

## 400ಕ್ಕೂ ಹೆಚ್ಚು ಸಂಘ ಸಂಸ್ಥೆಗಳ ಸಹಕಾರ

ಈಗಾಗಲೇ ಅನೇಕ ಸಂಘ ಸಂಸ್ಥೆಗಳು 40 ಲಕ್ಷಕ್ಕೂ ಮಿಕ್ಕ ಸೀಡ್ ಬಾಲ್ ಗಳನ್ನು ತಯಾರು ಮಾಡಿವೆ. ಈ ಅಭಿಯಾನಕ್ಕೆ ರಾಜ್ಯದ ನಾನಾ ಕಾರ್ಪೊರೇಟ್ ಸಂಸ್ಥೆಗಳೂ ಕೂಡ ಕೈಜೋಡಿಸಿವೆ. ರಾಜ್ಯದ ನಾನಾ ಶಾಲಾ ಕಾಲೇಜುಗಳ ಸಂಪರ್ಕ ಮಾಡಿ ಮಕ್ಕಳನ್ನು ಕೂಡ ಬಾಗಿಯಾಗುವಂತೆ ಮಾಡಲು ಮಾತುಕತೆ ನಡೆಯುತ್ತಿದೆ. ಸರ್ಕಾರಿ ಸಂಸ್ಥೆಯಾದ ಕೆಎಂಎಫ್ ಕೂಡ ಪರಿಸರ ಸಂರಕ್ಷಣೆಗೆ ಕೈ ಜೋಡಿಸುತ್ತಿದ್ದು, ನೆಲಮಂಗಲ ಸಮೀಪದ ತೋಟವೊಂದಕ್ಕೆ ಹನಿ ನೀರಾವರಿಗೆ 2.30ಲಕ್ಷ ರೂಪಾಯಿ ದೇಣಿಗೆ ನೀಡಿದೆ. ರಾಜ್ಯದಲ್ಲಿ ನೈಸರ್ಗಿಕ ವಿಕೋಪದಿಂದ ಅರಣ್ಯಗಳು ನಾಶವಾಗುತ್ತಿವೆ. ಅದನ್ನು ಸಂರಕ್ಷಿಸಬೇಕಾದ ಸಂಪೂರ್ಣ ಜವಾಬ್ದಾರಿ ನಮ್ಮ ಮೇಲಿದೆ. ಗಿಡಗಳನ್ನು ಶಾಲೆ, ಕಾಲೇಜು, ದೇವಸ್ಥಾನ, ಮನೆಗಳ ಕಾಂಪೌಂಡ್ ಗಳಲ್ಲಿ ಗಿಡಗಳನ್ನು ನೆಡುತ್ತೇವೆ. ಗಿಡ ನೆಟ್ಟ ತಕ್ಷಣ ಜವಾಬ್ದಾರಿ ಮುಗಿಯುವುದಿಲ್ಲ, ಅದನ್ನು ಪಾಲನೆ ಮಾಡುವತ್ತಲೂ ಗಮನಹರಿಸಲು ಮನವಿ ಮಾಡಲಾಗಿದೆ.

## ಮರಗಳ ನಿರ್ವಹಣೆಯತ್ತ ಗಮನ

ಗಿಡಗಳನ್ನು ನೆಡುವುದು ಮಾತ್ರ ನಮ್ಮ ಜವಾಬ್ದಾರಿ ಆಗಬಾರದು. ನೆಟ್ಟ ಬಳಿಕ ಅದರ ನಿರ್ವಹಣೆಯತ್ತಲೂ ಗಮನಹರಿಸಬೇಕು. ಆಯಾ ಪ್ರದೇಶಕ್ಕೆ ಹೊಂದಿಕೊಳ್ಳುವ ಗಿಡಗಳನ್ನು ನೆಡುವುದು ಮತ್ತು ಕನಿಷ್ಠ ಮೂರು ವರ್ಷಗಳ ಕಾಲ ಸಂರಕ್ಷಣೆ ಮಾಡಲು ಸಾಧ್ಯವಾಗುವ ಕಡೆಗಳಲ್ಲಿ ಮಾತ್ರ ಗಿಡಗಳನ್ನು ನೆಡಬೇಕು. ನೇಪಾಳ, ಭೂತಾನ್ ಮುಂತಾದ ದೇಶಗಳಲ್ಲಿ ಶೇ. 60ರಷ್ಟು ಅರಣ್ಯ ಇರಲೇಬೇಕೆಂಬ ತಾಕೀತು ಅಲ್ಲಿನ ಸಂವಿಧಾನದಲ್ಲಿದೆ. ಭಾರತದಲ್ಲಿ ಶೇ.33 ರಷ್ಟಿದ್ದ ಅರಣ್ಯ ಪ್ರದೇಶ ಶೇ. 22ಕ್ಕೆ ಇಳಿದಿದೆ. ಈ ಸಮಯದಲ್ಲಿ ಜಲ ಸಂಪನ್ಮೂಲಗಳು ಅಭಿವೃದ್ಧಿಯಾಗದೆ ದೇಶೀಯ ಉತ್ಪನ್ನವನ್ನು ಪರಿಗಣಿಸಲು ಸಾಧ್ಯವಿಲ್ಲ. ಅರಣ್ಯವನ್ನು ಉಳಿಸಿ ಬೆಳೆಸಬೇಕಾದ ಮನಸ್ಸುಗಳ ಅಗತ್ಯ ಈ ದೇಶಕ್ಕಿದೆ. ಸಮರ್ಥ ಭಾರತದ ಈ ಯೋಜನೆಯಲ್ಲಿ ಮನೆಗೊಬ್ಬರಂತೆ ಪಾಲ್ಗೊಳ್ಳಬೇಕಿದೆ. ರಾಜ್ಯದಲ್ಲಿ 6 ಕೋಟಿ ಜನಸಂಖ್ಯೆಯಿದ್ದು, ಒಬ್ಬೊಬ್ಬರು ಒಂದೊಂದು ಸಸಿ ನೆಟ್ಟರೆ ನಮ್ಮ ಪರಿಸರ ಹಚ್ಚ ಹಸಿರಾಗಿಡಲು ಸಾಧ್ಯವಿದೆ.

## ಗಿಡದ ಜೊತೆ ಸೆಲ್ಫಿ

ಅಭಿಯಾನಕ್ಕೆ ಸಾಮಾಜಿಕ ಜಾಲ ತಾಣಗಳನ್ನು ಪರಿಣಾಮಕಾರಿಯಾಗಿ ಬಳಿಸಿಕೊಳ್ಳಲಾಗುವುದು. ಗಿಡಗಳನ್ನು ಬೆಳೆಸುವ ಸ್ವಯಂಸೇವಕರು ಅವುಗಳ ಜೊತೆ ಸೆಲ್ಫಿ ತೆಗೆದು #SamarthaBharata ಹ್ಯಾಷ್ ಟ್ಯಾಗ್‌ನೊಂದಿಗೆ ಟ್ವಿಟ್ಟರ್ ಅಥವಾ ಫೇಸ್ ಬುಕ್ ನಲ್ಲಿ ಹಂಚಿಕೊಳ್ಳಬಹುದು. ಪರಿಸರ ಸಂರಕ್ಷಣೆ ಕುರಿತ ವಿಚಾರಗಳನ್ನು, ವಿಡಿಯೋ ಹಾಗೂ ಇನ್ಫೋಗ್ರಾಫಿಕ್ಸ್ ಗಳನ್ನು ಜಾಲತಾಣಗಳ ಮೂಲಕ ಹಂಚಿಕೊಳ್ಳಬಹುದು.

## ಹೀಗಿರಲಿದೆ ಅಭಿಯಾನ

- ಯಾವಾಗ? ಜೂನ್ 5ರಿಂದ ಆಗಸ್ಟ್ 15ರವರೆಗೆ
- ಎಲ್ಲಿ? ತಾಲೂಕು- ಹೋಬಳಿ-ಗ್ರಾಮ ಪಂಚಾಯತಿ ಮಟ್ಟದಲ್ಲಿ, ಸರಕಾರಿ ಅಥವಾ ಖಾಸಗಿ ಖಾಲಿ ಸ್ಥಳಗಳಲ್ಲಿ, ಇದಕ್ಕಾಗಿ ಸಂಬಂಧಪಟ್ಟವರಲ್ಲಿ ಪೂರ್ವ ಅನುಮತಿ ತೆಗೆದುಕೊಳ್ಳಬೇಕು.
- ಯಾವ ಗಿಡ? ಪ್ರದೇಶಾನುಸಾರವಾಗಿ ಹೆಚ್ಚಾಗಿ ಹಣ್ಣು-ಹಂಪಲು, ನೆರಳು ಹಾಗೂ ಜೀವ ವೈವಿಧ್ಯಕ್ಕೆ ಪೂರಕವಾಗಬಲ್ಲ ಮರಗಳನ್ನೇ ಆಯ್ಕೆ ಮಾಡಬೇಕು. ಅಕೇಶಿಯಾ, ನೀಲಗಿರಿ (ಯುಕಲಿಪ್ಟಸ್) ಮರಗಳನ್ನು ನೆಡಬಾರದು ಎಂಬುದು ಪರಿಸರ ತಜ್ಞರ ಸಲಹೆ.

